

ದಿನ 'ಎಚ್ಚಮ ನಾಯಕ' ನಾಟಕ ಆಡಿದ್ರು. ಆ ಎಚ್ಚಮ ನಾಯಕ ನಾಟಕ ನೋಡಿ ಪ್ರಭಾವಿತನಾದೆ. 'ಯಾಕೆ ನಾನು ನಾಟಕ ಮಾಡಬಾರದು' ಅನ್ನಿಸ್ತು. ನಮ್ಮೂರು ತುಮಕೂರು ಸಮೀಪದ ಮಲ್ಲಸಂದ್ರ. ಆ ಊರು ನಾಟಕಗಳಿಗೆ ಬಹಳ ಪ್ರಸಿದ್ಧಿ ಆ ಕಾಲದಲ್ಲಿ. 'ಭಕ್ತ ಪ್ರಹ್ಲಾದ', 'ದಕ್ಷ ಯಜ್ಞ', 'ಗಿರಿಜಾ ಕಲ್ಯಾಣ', 'ಕೃಷ್ಣ ಗಾರುಡಿ...' ಇಂತಹ ನಾಟಕಗಳೆಲ್ಲ ನಮ್ಮೂರು ಗ್ರಾಮೀಣ ಭಾಗದಲ್ಲಿ ಆಗ್ತಾ ಇದ್ವು. ನಮ್ಮೂರಿನ ಈ ನಾಟಕಗಳಿಂದಲೂ ಸ್ವಲ್ಪ ಪ್ರಭಾವಿತನಾದೆ.

ಯಾವಾಗ ರಾಜ್‌ಕುಮಾರ್ ಅವರ 'ಎಚ್ಚಮ ನಾಯಕ' ನೋಡುದ್ನೋ, ಅವತ್ಲೇ ನಾನು ನಾಟಕದತ್ತ ಪ್ರಭಾವಿತನಾಗಿಬಿಟ್ಟೆ. ನಾವೇ ನಾಲ್ಕೈದು ಜನ ಹುಡುಗ್ರು ಸೇರ್ಕಂಡು ಮಲ್ಲಸಂದ್ರದಲ್ಲಿ 'ನವೋದಯ ಕಲಾಸಂಘ' ಅಂತ ಸ್ಥಾಪನೆ ಮಾಡ್ಕಂಡು, ನಮ್ಮೂರಲ್ಲೇ 'ಎಚ್ಚಮ ನಾಯಕ' ಆಡುದ್ವಿ. ಅಲ್ಲಿಯೇ ಚಿತ್ತಪ್ಪ ಅನ್ನೋರು ಹಾರ್ಮೋನಿಯಂ ಮೇಷ್ಟ್ರಾಗಿ ಸಿಕ್ಕಿದರು. ಆಗ ನಮಗೇನು ಹಾಡುಗಳ ಸ್ವರೂಪ ಸರಿಯಾಗಿ ಗೊತ್ತಿರಲಿಲ್ಲ. ಕಂಪನಿಯಲ್ಲಿ 'ಎಚ್ಚಮ ನಾಯಕ' ನಾಟಕ ಏನಿತ್ತೋ ಆ ಕ್ರಮದಲ್ಲಿ ನಾವು ಆಡ್ತಿರಲಿಲ್ಲ. ಯಾಕೆಂದರೆ, ನಮಗೆ ಸರಿಯಾಗಿ ಹೇಳಿಕೊಡೋರು ಯಾರು ಇರಲಿಲ್ಲ. ನಾವೇ ಕಲಿತುಕೊಳ್ಳೋದು. ನಾವೇ ಆಡೋದು. 'ಎಚ್ಚಮ ನಾಯಕ' ನಾಟಕ ಆದ ಮೇಲೆ ಮುಂದುವರಿಸಿಕೊಂಡು ಹೋಗ್ತಿದ್ದೆ.

ಅಷ್ಟೊತ್ತಿಗೆ ಏನಾಯ್ತು, ಈ ಕಂಪನಿ ಕಲಾವಿದರೆಲ್ಲ ಕಂಪನಿ ಬಿಟ್ಬಿಟ್ಟು ಬೇರೆಬೇರೆ ತಂಡ ಕಟ್ಕಂಡು ಊರೂರಲ್ಲಿ ನಾಟಕ ಆಡ್ತಿದ್ರಲ್ಲ, ಆಗ ನನಗೆ ಒಂದು ಒಳ್ಳೆ ಕಂಪನಿ ಸಿಕ್ತು. ಎನ್.ಎಸ್. ಮೂರ್ತಿ ಅಂತ, ಮೊನ್ನೆ ಮೊನ್ನೆ ತೀರ್ಕಂಡ್ರು. ಅವರು ನಂಜನಗೂಡಿನೋರು. ಮೂಲತಃ ಮೇಕಪ್ ಕಲಾವಿದರು. ತುಮಕೂರಿಗೆ ಬಂದು ಮೇಕಪ್ ಮಾಡ್ಕಂಡು ಪೌರಾಣಿಕ, ಸಾಮಾಜಿಕ, ಐತಿಹಾಸಿಕ ನಾಟಕಗಳಲ್ಲಿ ಹಾಸ್ಯಪಾತ್ರಗಳನ್ನು ಮಾಡೋರು. 'ಎಚ್ಚಮ ನಾಯಕ' ನಾಟಕದಲ್ಲಿ ಬುಡನ್ ಶಾಸ್ತ್ರೀ ಪಾತ್ರ ಮಾಡೋರು, 'ಸಂಸಾರ ನೌಕ'ದಲ್ಲಿ ಸಿದ್ಧನ ಪಾತ್ರ, ಆಮೇಲೆ 'ಮಕ್ಮಲ್ ಟೋಪಿ' ನಾಟಕದಲ್ಲಿ ರಾಮನ ಪಾತ್ರ ಮಾಡೋರು. ಹೀಗೆ ಅವರು ನಮ್ಮ 'ಎಚ್ಚಮ ನಾಯಕ' ನಾಟಕಕ್ಕೆ ಮೇಕಪ್ ಮಾಡಲು ಬಂದವರು ನನ್ನ ನೋಡುದ್ರು. ಅವರ